ದಿನಾಂಕ 30.01.2019 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀಸವಾಲು ಃ ಶ್ರೀ ಎಸ್.ಬಿ ವಕೀಲರಿಂದಃ**

ಚಿಕ್ಕದಾಸಪ್ಪನಿಗೆ ೫ ಜನ ಮಕ್ಕಳು. ಅವರೆಲ್ಲರೂ ಮೃತಪಟ್ಟಿದ್ದಾರೆ. ಅದರಲ್ಲಿ ೩ ನೇ ಮಗ ದ್ಯಾವಣ್ಣ, ಮೊದಲು ಮರಣ ಹೊಂದಿದ್ದರು. ನಂತರ ಈರಮರಿಯಣ್ಣ ಮೃತಪಟ್ಟಿರುತ್ತಾರೆ. ಚಿಕ್ಕದಾಸಪ್ಪನ ೨ ನೇ ಮಗ ರಂಗಪ್ಪನ ಹೆಂಡತಿಯ ಹೆಸರು ನಿಂಗಮ್ಮ. ಸದರಿ ರಂಗಪ್ಪನಿಗೆ ಇಬ್ಬರು ಹೆಣ್ಣು ಮಕ್ಕಳು. ಅದರಲ್ಲಿ ದ್ಯಾವರಮ್ಮ ಎನ್ನುವವರು ಮೃತಪಟ್ಟಿದ್ದಾರೆ. ಆಕೆಗೆ ಆಕೆಯ ತಾಯಿಯ ಸಹೋದರಿನಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಆಕೆಯ ಗಂಡ ಮೃತಪಟ್ಟಿದ್ದಾನೆ. ಆಕೆಗೆ ೪ ಜನ ಮಕ್ಕಳು. ಅವರು ಬದುಕಿದ್ದಾರೆ. ವಾದಿಯರು ಈ ದಾವೆಯು ಪ್ರತಿವಾದಿ ೧, ೪ ಮತ್ತು ೫ ಇವರ ವಿರುದ್ದ ಹಾಕಿದ್ದಾರೆ. ೪ ನೇ ಪ್ರತಿವಾದಿ ಬದುಕಿದ್ದಾನೆ ಎಂದರೆ ನಿಜ. ನಾನು ೪ ನೇ ಪ್ರತಿವಾದಿಯು ಮರಣ ಹೊಂದಿದ್ದಾನೆ ಎಂದು ಹೇಳಿ ಬರೆಸಿಲ್ಲ. ದಾವಾಸ್ತಿಗಳ ಸರ್ವೆ ನಂ ನನಗೆ ಗೊತ್ತು, ಅವುಗಳ ವಿಸ್ತೀರ್ಣ ನನಗೆ ಹೇಳಲು ಬರುವುದಿಲ್ಲ. ನನಗೆ ಚಕ್ಕುಬಂಧಿ ಹೇಳಲು ಬರುವುದಿಲ್ಲ. ದಾವಾ ಸರ್ವೆ ನಂ ೬೪ ಮತ್ತು ೬೫ ರ ಆಸ್ತಿಗಳು ಮೊದಲಿಗೆ ಚಿಕ್ಕದಾಸಪ್ಪರವರಿಗೆ ಸೇರಿದ್ದವು. ಆ ಬಗ್ಗೆ ನಾನು ದಾಖಲೆ ನೋಡಿರುವುದಿಲ್ಲ. ದಾವಾ ಐಟಂ ನಂ ೧ ಮತ್ತು ೨ ಮೊದಲಿಗೆ ಸರ್ಕಾರಿ ಜಮೀನು ಎಂದರೆ ಗೊತ್ತಿಲ್ಲ. ಈ ೨ ಆಸ್ತಿಗಳು ಚಿಕ್ಕದಾಸಪ್ಪನ ಮೊದಲನೇ ಮಗ ಈರಮರಿಯಪ್ಪನಿಗೆ ಸರ್ಕಾರದಿಂದ ಮಂಜೂರಾಗಿದ್ದವು ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ ೧ ಮತ್ತು ೨ ಆಸ್ತಿಗಳು ಆತನ ಸ್ವಯಾರ್ಜಿತ ಆಸ್ತಿಗಳು ಎಂದರೆ ಸರಿಯಲ್ಲ. ಈ ೨ ಆಸ್ತಿಗಳ ಕಂದಾಯ ದಾಖಲಾತಿಗಳು ಆತನ ಹೆಸರಿಗೆ ಇದ್ದವು ಎಂದರೆ ಗೊತ್ತಿಲ್ಲ.

ದಾವಾ ಐಟಂ ನಂ ೧ ರ ಸ್ವತ್ತು ಸದರಿ ಈರಮರಿಯಪ್ಪ ಈತನು ಶಿರಾದ ಸಂತೇಪೇಟೆಯ ಪೂಜಾರಿ ಗಿರಿಯಪ್ಪನ ಮಗ ಗೋವಿಂದಪ್ಪ ಈತನಿಗೆ ದಿಃ೦೪.೦೫.೧೯೮೧ ರಲ್ಲಿ ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಅಂದಿನಿಂದ ಆತ ಮೃತಪಡುವವರೆವಿಗೂ ಆ ಆಸ್ತಿಯಲ್ಲಿ ಆತನೇ ಸ್ವಾಧೀನ ಹೊಂದಿದ್ದ ಎಂದರೆ ಸರಿಯಲ್ಲ. ಆತ ಮೃತಪಟ್ಟ ಬಳಿಕ ಆತನ ಹೆಂಡತಿ ಮತ್ತು ಮಕ್ಕಳ ಹೆಸರಿಗೆ ಕಂದಾಯ ದಾಖಲಾತಿಗಳು ವರ್ಗಾವಣೆ ಆಗಿದ್ದವು ಮತ್ತು ಅವರು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ. ನಂತರ ಸದರಿ ಗೋವಿಂದಪ್ಪನ ಹೆಂಡತಿ ಮತ್ತು ಮಕ್ಕಳು ೪ ನೇ ಪ್ರತಿವಾದಿಗೆ ದಿಃ೨೪.೦೧.೨೦೦೪ ರಂದು ಮಾರಾಟ ಮಾಡಿದ್ದರು ಎಂದರೆ ಗೊತ್ತಿಲ್ಲ. ಅದೇ ದಿನ ೪ ನೇ ಪ್ರತಿವಾದಿಗೆ ಅದರ ಸ್ವಾಧೀನ ಸಹ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ೪ ನೇ ಪ್ರತಿವಾದಿಯ ಹೆಸರಿಗೆ ಕಂದಾಯ ದಾಖಲಾತಿಗಳು ಬದಲಾವಣೆ ಆಗಿವೆ ಎಂದರೆ ಗೊತ್ತಿಲ್ಲ.

ದಾವಾ ಐಟಂ ನಂ ೨ ರ ಸ್ವತ್ತು ಚಿಕ್ಕದಾಸಪ್ಪನ ಮಗ ಈರಮರಿಯಪ್ಪ ೫ ನೇ ಪ್ರತಿವಾದಿಗೆ ದಿಃ೧೩.೦೪.೧೯೯೩ ರಲ್ಲಿ ಶುದ್ದಕ್ರಯಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಗೊತ್ತಿಲ್ಲ. ಅದೇ ದಿನ ಸ್ವಾಧೀನ ಸಹ

ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆಕೆಯ ಹೆಸರಿಗೆ ಕಂದಾಯ ದಾಖಲಾತಿಗಳು ಸಹ ಆಗಿವೆ ಎಂದರೆ ಗೊತ್ತಿಲ್ಲ. ೫ ನೇ ಪ್ರತಿವಾದಿಗೆ ಚಿತ್ತಮ್ಮ ಎಂದು ಸಹ ಕರೆಯುತ್ತಾರೆ ಎಂದರೆ ಗೊತ್ತಿಲ್ಲ. ದಾವಾ ಐಟಂ ನಂ ೧ ಮತ್ತು ೨ ರಲ್ಲಿ ೪ ಮತ್ತು ೫ ನೇ ಪ್ರತಿವಾದಿಯೇ ಕ್ರಯ ಆದ ದಿನದಿಂದ ಸ್ವಾಧೀನ ಹೊಂದಿದ್ದಾರೆ ಎಂದರೆ ಸರಿಯಲ್ಲ. ೧೯೬೪ ರಲ್ಲಿ ಕದರಪ್ಪನ ಹೆಂಡತಿ ವಿಭಾಗಕ್ಕಾಗಿ ದಾವೆ ಹಾಕಿದ್ದಳು ಎಂದರೆ ಗೊತ್ತಿಲ್ಲ.

ಪಂಚಾಯಿತಿ ಪಾಲುಪತ್ರ ಆಗಿದೆ ಎಂದು ಹೇಳಿದ್ದು ಅದನ್ನು ನಾನು ನೋಡಿಲ್ಲ. ಪಂಚಾಯಿತಿ ಪಾಲು ಪತ್ರ ಮಾಡುವಾಗ ನಾನು ಇರಲಿಲ್ಲ. ದಾವಾ ಐಟಂ ನಂ ೧ ಮತ್ತು ೨ ಚಿಕ್ಕದಾಸಪ್ಪನ ಮಕ್ಕಳ ಒಟ್ಟು ಕುಟುಂಬದ ಸ್ವತ್ತುಗಳು ಆಗಿರಲಿಲ್ಲ ಎಂದರೆ ಸರಿಯಲ್ಲ. ಆ ಸ್ವತ್ತುಗಳು ಈರಮರಿಯಪ್ಪನ ಸ್ವಯಾರ್ಜಿತ ಆಸ್ತಿಗಳು ಆಗಿದ್ದವು ಎಂದರೆ ಸರಿಯಲ್ಲ. ದಾವಾ ಐಟಂ ನಂ ೧ ಮತ್ತು ೨ ರಲ್ಲಿ ಚಿಕ್ಕದಾಸಪ್ಪನ ಮಕ್ಕಳು ಜಂಟಿಯಾಗಿ ಯಾವತ್ತೂ ಸಹ ಅನುಭವ ಮಾಡಿರಲಿಲ್ಲ ಎಂದರೆ ಸರಿಯಲ್ಲ. ನಾನು ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದಾವಾಸ್ತಿಗಳ ಸುತ್ತಮುತ್ತ ನನ್ನ ಆಸ್ತಿಯು ಇಲ್ಲ.

ನನ್ನ ಮತ್ತು ಮುಸ್ಲಿಂ ವ್ಯಕ್ತಿಯೊಬ್ಬನ ನಡುವೆ ಮಲ್ಲಿಕಾಪುರ ಸರ್ವೆ ನಂ ಆಸ್ತಿಯ ಬಗ್ಗೆ ದಾವೆ ನಡೆಯುತ್ತಿದೆ ಎಂದರೆ ನಿಜ. ಆ ವ್ಯಕ್ತಿಗೆ 4 ನೇ ಪ್ರತಿವಾದಿಯು ಸಹಾಯ ಮಾಡುತ್ತಾನೆ ಎಂದು ನಾನು ಆತನ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರ್‌ಗೊಳಿಸಿ ದಾಖಲಿಸಿ ಪ್ರಿಂಟ್ ತೆಗೆಯಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ,

ಹಿರಿಯ ಸಿ.ಜೆ. ಮತ್ತು ಜೆಎಂಎಫ್.ಸಿ ಸಿರಾ.